ಕರ್ನಾಟಕ ಸರ್ಕಾರ

ಸಂಖ್ಯೆ:ಆಇ 8 ಸೇನಿಸೇ 2013

ಕರ್ನಾಟಕ ಸರ್ಕಾರ ಸಚಿವಾಲಯ,
ವಿಧಾನಸೌಧ, 2ನೇ ಮಹಡಿ,
ಬೆಂಗಳೂರು, ದಿನಾಂಕ: 04.09.2013

ಸುತ್ತೋಲೆ

ವಿಷಯ: ಸರ್ಕಾರ ಮತ್ತು ಸರ್ಕಾರದ ಅಧೀನದ ನಿಗಮ, ಮಂಡಳಿ ಮತ್ತು ಸಂಘ ಸಂಸ್ಥೆಗಳಲ್ಲಿ ಮಾಡಲಾದ ದಿನಗೂಲಿ, ಗುತ್ತಿಗೆ ಮತ್ತು ಇತರೆ ತಾತ್ಕಾಲಿಕ ನೇಮಕಾತಿಗಳ ಸಕ್ರಮಾತಿ ಬಗ್ಗೆ.

ಉಲ್ಲೇಖ:, 1. ಸರ್ವೋಚ್ಚ ನ್ಯಾಯಾಲಯದಲ್ಲಿನ ಅಪೀಲು(ಸಿವಿಲ್) ಸಂಖ್ಯೆ:3595-3612/1999 ಶ್ರೀಮತಿ ಉಮಾದೇವಿ ಮತ್ತು ಇತರರು ಮೇಲಿನ ತೀರ್ಪು ದಿನಾಂಕ 10.5.2006.

2. ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿನ ರಿಟ್ ಅರ್ಜಿ ಸಂಖ್ಯೆ: 41145/2012 ಶ್ರೀ ಜಿ. ರವಿ ವಿರುದ್ಧ ರಾಜ್ಯ ಸರ್ಕಾರ ಮೇಲಿನ ತೀರ್ಪು ದಿನಾಂಕ 13.7.2012 ಮತ್ತು ಇದರ ವಿರುದ್ಧದ ಅಪೀಲು ಸಂಬಂಧದಲ್ಲಿ ಸರ್ವೋಚ್ಚ ನ್ಯಾಯಾಲಯದ ತೀರ್ಪು ದಿನಾಂಕ 14.12.2012

****

ಸರ್ಕಾರ ಮತ್ತು ಸರ್ಕಾರದ ಅಧೀನದ ನಿಗಮ, ಮಂಡಳಿ, ಸಂಘ ಸಂಸ್ಥೆಗಳಲ್ಲಿ ದಿನಗೂಲಿ, ಗುತ್ತಿಗೆ ಮತ್ತು ಇತರ ತಾತ್ಕಾಲಿಕ ನೇಮಕಾತಿಗಳ ಆಧಾರದ ಮೇಲೆ ಮಾಡಿಕೊಳ್ಳಲಾದ ನೇಮಕಾತಿಗಳನ್ನು ಸಕ್ರಮಗೊಳಿಸಲು ಹಲವಾರು ಇಲಾಖೆಗಳಿಂದ ಪ್ರಸ್ತಾವನೆಗಳು ಆರ್ಥಿಕ ಇಲಾಖೆಯ ಅಭಿಪ್ರಾಯ/ಅನುಮೋದನೆಗಾಗಿ ಬರುತ್ತಿವೆ.

ತಾತ್ಕಾಲಿಕ ನೇಮಕಾತಿಗಳ ಸಕ್ರಮಾತಿ ಕುರಿತಂತೆ ಸರ್ವೋಚ್ಚ ನ್ಯಾಯಾಲಯದ ಸಂವಿಧಾನ ಪೀಠವು ಉಮಾದೇವಿ ಪ್ರಕರಣದಲ್ಲಿ ಕಾನೂನನ್ನು ವಿಶ್ಲೇಷಿಸಿ ಕೆಳಕಂಡಂತೆ ತೀರ್ಪು ನೀಡಿದೆ:-

> "..... *it is clear that adherence to the rule of equality in public employment is a basic feature of our Constitution and since the rule of law is the core of our Constitution, a Court would certainly be disabled from passing an order upholding a violation of Article 14 or in ordering the overlooking of the need to comply with the requirements of Article 14 read with Article 16 of the Constitution.*

*Therefore, consistent with the scheme for public employment, this Court while laying down the law, has necessarily to hold that unless the appointment is in terms of the relevant rules and after a proper competition among qualified persons, the same would not confer any right on the appointee. If it is a contractual appointment, the appointment comes to an end at the end of the contract, if it were an engagement or appointment on daily wages or casual basis, the same would come to an end when it is discontinued. Similarly, a temporary employee could not claim to be made permanent on the expiry of his term of appointment. It has also to be clarified that merely because a temporary employee or a casual wage worker is continued for a time beyond the term of his appointment, he would not be entitled to be absorbed in regular service or made permanent, merely on the strength of such continuance, if the original appointment was not made by following a due process of selection as envisaged by the relevant rules. ....... Merely because, an employee had continued under cover of an order of Court, which we have described as 'litigious employment' in the earlier part of the judgment, he would not be entitled to any right to be absorbed or made permanent in the service."*

ಮುಂದುವರೆದಂತೆ, ನ್ಯಾಯಾಲಯವು "......... *there should be no further by-passing of the Constitutional requirement and regularizing or making permanent, those not duly appointed as per the Constitutional scheme.*" ತಿಳಿಸಿದೆ.

ಅಲ್ಲದೆ, ಸರ್ವೋಚ್ಚ ನ್ಯಾಯಾಲಯದ ಸಂವಿಧಾನ ಪೀಠವು ಉಮಾದೇವಿ ಪ್ರಕರಣದಲ್ಲಿ ಸಕ್ರಮಾತಿ ಕುರಿತಂತೆ ಕಾನೂನನ್ನು ಪ್ರಚುರಪಡಿಸಿರುವುದರಿಂದ, ಈ ತೀರ್ಪಿನಲ್ಲಿ ಘೋಷಿಸಿರುವ ತತ್ವಕ್ಕೆ ವಿರುದ್ಧವಾದ ಯಾವುದೇ ನ್ಯಾಯಾಲಯದ ತೀರ್ಪು ಪೂರ್ವ ನಿದರ್ಶನವಾಗಿ ಉಳಿಯುವುದಿಲ್ಲವೆಂದು ತಿಳಿಸುತ್ತಾ, ಈ ರೀತಿ ಹೇಳಿದೆ-"*It is also clarified that those decisions which run counter to the principle settled in this decision or in which directions running counter to what we have held herein, will stand denuded of their status as precedents.*"

ಈ ನಿರ್ದೇಶನವು ಸರ್ಕಾರದ ಅಧೀನದಲ್ಲಿನ ಸಂಘ ಸಂಸ್ಥೆಗಳಿಗೂ ಸಹ ಯಥಾವತ್ತಾಗಿ ಅನ್ವಯವಾಗುತ್ತದೆ. ಇತ್ತೀಚೆಗೆ ರಾಜ್ಯ ಉಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂ:41145/2012 ಮತ್ತು

ಇತರೇ ಪ್ರಕರಣದಲ್ಲಿ (ಜಿ. ರವಿ ಮತ್ತು ಇತರರು) ದಿನಾಂಕ: 13.07.2012 ರಂದು ಉಮಾದೇವಿ ಪ್ರಕರಣದಲ್ಲಿನ ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಗಮನದಲ್ಲಿರಿಸಿ, ವಿವರವಾದ ಆದೇಶವನ್ನು ನೀಡಿದೆ. ಈ ಆದೇಶವನ್ನು ಸರ್ವೋಚ್ಚ ನ್ಯಾಯಾಲಯವು ಸಹ ದಿನಾಂಕ:14.12.2012 ರ ತೀರ್ಪಿನಲ್ಲಿ ಎತ್ತಿ ಹಿಡಿದಿದೆ. ರಾಜ್ಯ ಉಚ್ಚನ್ಯಾಯಾಲಯವು ತನ್ನ ಈ ತೀರ್ಪಿನಲ್ಲಿ ಸರ್ವೋಚ್ಚ ನ್ಯಾಯಾಲಯದ ಸಂವಿಧಾನ ಪೀಠದ ತೀರ್ಪನ್ನು ಒತ್ತಿ ಹೇಳುತ್ತಾ ಈ ಕೆಳಕಂಡಂತೆ ಪ್ರಮುಖ ಅವಲೋಕನೆಗಳನ್ನು ಮಾಡಿದೆ:–

> *"'But the enacting law also should be in accordance with Constitutional scheme."*
>
> *"...... By doing so the State wants to create another mode of public employment which is not provided for under our Constitutional scheme and which in fact is contrary to the Constitutional scheme. In this regard the State is ill advised. The State cannot be permitted to indulge in such illegal acts under the cover of a legislative device which is nothing but a colourable exercise of such rule making power conferred. It runs counter to Article 14 and 16 of the Constitution. It is unconstitutional and arbitrary ......"*
>
> *"...... The impugned rules are framed to set at naught a binding judicial pronouncement which had the seal of the Apex Court........"*

ಸರ್ಕಾರವು ತನ್ನ ಅಧಿಕಾರವನ್ನು ಕಾನೂನಿನ ಅನ್ವಯವೇ ಚಲಾಯಿಸಬೇಕಾಗುತ್ತದೆ ಎಂದು ನ್ಯಾಯಾಲಯವು ತಿಳಿಸುತ್ತಾ, ಸ್ವೇಚ್ಛಾಚಾರದಿಂದ, ಅಸಮಂಜಸವಾಗಿ ಮತ್ತು ಮನಬಂದಂತೆ ಕಾನೂನನ್ನು ಚಲಾಯಿಸಿ ಸಂವಿಧಾನಿಕ ಕ್ರಮಗಳಿಗೆ ವಿರುದ್ಧವಾದ ರೀತಿಯಲ್ಲಿ ಸಕ್ರಮಾತಿ ಮಾಡುವ ಪ್ರವೃತ್ತಿಯನ್ನು ಕಟುವಾಗಿ ಟೀಕಿಸಿದೆ. ಇತ್ತೀಚೆಗೆ ಸರ್ಕಾರವು ಸಹ ದಿನಗೂಲಿ ನೌಕರರ ಸಕ್ರಮಾತಿ ಬಗ್ಗೆ ಬೇಡಿಕೆ ಮತ್ತು ಏನೇ ಒತ್ತಡಗಳು ಇದ್ದರೂ, ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ಹಿನ್ನೆಲೆಯಲ್ಲಿ, ಇವರನ್ನು ಸರ್ಕಾರದ ಸೇವೆಯಲ್ಲಿ ಸಕ್ರಮಗೊಳಿಸಬೇಕೆಂಬ ಬೇಡಿಕೆಯನ್ನು ಒಪ್ಪದೆ, ಕೆಲವೊಂದು ಸೇವಾ ರಕ್ಷಣೆಯನ್ನು ಮಾತ್ರ ನೀಡಲು ಅಧಿನಿಯಮವನ್ನು ರೂಪಿಸಿರುವುದನ್ನು ಇಲ್ಲಿ ಗಮನಿಸಬಹುದು.

ನ್ಯಾಯಾಲಯಗಳು, ಸರ್ಕಾರ ಮತ್ತು ಇದರ ಅಧೀನ ಸಂಸ್ಥೆಗಳು ಮಾಡುವ ನೇಮಕಾತಿಗಳು (ಸಕ್ರಮಾತಿಯೂ ಸೇರಿದಂತೆ) ಸಂವಿಧಾನಾತ್ಮಕವಾಗಿ ಮಾಡುವ ನೇಮಕಾತಿ ನಿಯಮಗಳನುಸಾರವೇ

ಇರಬೇಕೆಂದು ಮತ್ತು ಸಂವಿಧಾನದ ಉಪಬಂಧಗಳಿಗೆ ವಿರುದ್ಧವಾದ ಯಾವುದೇ ಕಾನೂನನ್ನು ಮಾಡಲು ಅವಕಾಶವಿಲ್ಲವೆಂದು ಪದೇಪದೇ ಒತ್ತಿ ಹೇಳುತ್ತಿದ್ದು, ಕಾನೂನಿಗೆ ವಿರುದ್ಧವಾಗಿ ತಾತ್ಕಾಲಿಕ ನೇಮಕಾತಿಗಳನ್ನು ಸಕ್ರಮಗೊಳಿಸಲು ಯಾವುದೇ ಕ್ರಮ ಜರುಗಿಸುವುದು ಕಾನೂನಿನ ಅನುಸಾರ ಸರಿಯಲ್ಲ ಮತ್ತು ಅಂತಹ ಕ್ರಮಗಳನ್ನು ಯಾವುದೇ ಕಾರಣಕ್ಕೂ ಮುಂದುವರೆಸುವುದು ಉಚಿತವಲ್ಲ.

ಆದ್ದರಿಂದ, ಆಡಳಿತ ಇಲಾಖೆಗಳು ಯಾವುದೇ ತಾತ್ಕಾಲಿಕ ನೇಮಕಾತಿಗಳ ಸಕ್ರಮಾತಿಗೆ ಸಂಬಂಧಪಟ್ಟ ಪ್ರಸ್ತಾವನೆಗಳನ್ನು ಪರಿಶೀಲಿಸುವಾಗ, ಮೇಲೆ ಉಲ್ಲೇಖಿಸಿರುವ ನ್ಯಾಯಾಲಯಗಳ ತೀರ್ಪನ್ನು ಗಮನದಲ್ಲಿಟ್ಟುಕೊಂಡು ಪರಿಶೀಲಿಸಬೇಕೆಂದು ಈ ಮೂಲಕ ತಿಳಿಸಲಾಗಿದೆ.

(ಎಸ್.ಆರ್.ಉಮಾಶಂಕರ್)
ಸರ್ಕಾರದ ಕಾರ್ಯದರ್ಶಿ(ವೆಚ್ಚ)
ಆರ್ಥಿಕ ಇಲಾಖೆ.

ಗೆ:

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು
3. ಎಲ್ಲಾ ಇಲಾಖಾ ಮುಖ್ಯಸ್ಥರುಗಳು
4. ಸಚಿವಾಲಯದ ಎಲ್ಲಾ ಇಲಾಖೆಯ ಅಪರ ಕಾರ್ಯದರ್ಶಿ/ಜಂಟಿ ಕಾರ್ಯದರ್ಶಿ/ ಉಪ ಕಾರ್ಯದರ್ಶಿ/ಅಧೀನ ಕಾರ್ಯದರ್ಶಿಗಳು